ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 1, Jul-Aug 2022, Pp. 132-136.
©*IIMRD*, Mysuru
IIMRD JOURNALS
www.iimrd.com

# ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಆಡಳಿತ: ಮಹಾರಾಜರಿಂದ ರಾಜ್ಯಪಾಲರವರೆಗೆ

**ಮಂಗಳಮ್ಮ. ಎಸ್***

*ಅತಿಥಿ ಉಪನ್ಯಾಸಕರು ಹಾಗೂ ಸಂಶೋಧನ ವಿದ್ಯಾರ್ಥಿ, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

**ಸಾರಾಂಶ: (Abstract)**

*ಪ್ರಜಾವಾತ್ಸಲ್ಯ, ದಾರ್ಶನಿಕ, ರಾಜನೀತಿಜ್ಞ, ಉತ್ತಮ ಆಡಳಿತಗಾರ ಮತ್ತು ಪ್ರಜಾಪ್ರಭುತ್ವದಲ್ಲಿ ರಾಜತ್ವವನ್ನು ವಿಲೀನಗೊಳಿಸಿದ ಮೈಸೂರು ರಾಜ ಸಂಸ್ಥಾನದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಕರ್ನಾಟಕ ರಾಜ್ಯ ಕಂಡ ಶ್ರೇಷ್ಠ ಮಹಾರಾಜರು. ಯದುವಂಶದ ಕೊನೆಯ ಮಹಾರಾಜರಾದ ಇವರು ತತ್ವಜ್ಞಾನಿ, ಸಂಗೀತ್ಞ, ರಾಜನೀತಿಜ್ಞ ಮತ್ತು ಉದಾರದಾನಿಯು ಕೂಡ ಆಗಿದ್ದರು. ಭಾರತವು ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ಮೈಸೂರು ರಾಜ ಸಂಸ್ಥಾನವನ್ನು ಭಾರತ ಸರ್ಕಾರದೊಂದಿಗೆ ವಿಲೀನಗೊಳಿಸಿ ಜವಾಬ್ದಾರಿಯುತ ಸರ್ಕಾರವನ್ನು ರಚನೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲಿ ಒಡೆಯರವರು ಭಾರತ ದೇಶದಲ್ಲಿಯೇ ಮೊದಲಿಗರಾಗಿದ್ದಾರೆ. ಭಾರತವು ಗಣರಾಜ್ಯವಾದಾಗ ಮೈಸೂರು ರಾಜ ಸಂಸ್ಥಾನವನ್ನು ಪ್ರಜಾರಾಜ್ಯವನ್ನಾಗಿ ಬದಲಾಯಿಸಿ ರಾಜ್ಯದ ಪ್ರಮುಖರಾಗಿ ಸೇವೆಯನ್ನು ಸಲ್ಲಿಸಿದರು. ನಂತರ ಭಾಷವಾರು ರಾಜ್ಯಗಳು ವಿಂಗಡಣೆಯಾದಾಗ ಕರ್ನಾಟಕ ರಾಜ್ಯದ ಪ್ರಥಮ ರಾಜ್ಯಪಾಲರಾಗಿಯು ಕೂಡ ಸೇವೆಯನ್ನು ನೀಡಿದರು. ಅಷ್ಟೇ ಅಲ್ಲದೆ ಮದ್ರಾಸ್ ರಾಜ್ಯದ ರಾಜ್ಯಪಾಲರಾಗಿಯು ಕೂಡ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ಆಡಳಿತದ ಅವಧಿಯನ್ನು ಮೈಸೂರು ರಾಜ್ಯದ 'ಯೋಗಾಯೋಗ'ವೆಂದೇ ಹೇಳಬಹುದು. ಪ್ರಸ್ತುತ ಲೇಖನವು ಸಂಪೂರ್ಣವಾಗಿ ದ್ವಿತೀಯ ಅಥವಾ ಅನುಷಂಗಿಕ ಮೂಲದ ದತ್ತಾಂಶಗಳನ್ನು ಆಧಾರಿಸಿದೆ.*

**ಮುಖ್ಯಪದಗಳು (Keywords):** ಪ್ರಜಾಪ್ರಭುತ್ವ, ಗಣರಾಜ್ಯ, ಜವಾಬ್ದಾರಿಯುತ ಸರ್ಕಾರ, ಸ್ವಾತಂತ್ರ್ಯ, ರಾಜತ್ವ ಇತ್ಯಾದಿ.

## ಪೀಠಿಕೆ

ಭಾರತಕ್ಕೆ ಸ್ವಾತಂತ್ರ್ಯ ಬರುವ ಮುನ್ನ ಬ್ರಿಟೀಷ್ ಇಂಡಿಯಾದಲ್ಲಿ ಇದ್ದದ್ದು 555 ಅರಸೊತ್ತಿಗೆಗಳು. ಅಸ್ತಿತ್ವದಲ್ಲಿದ್ದ ಬೆರಳೆಣಿಕೆಯ ವಿಶಾಲ ರಾಜ ಸಂಸ್ಥಾನಗಳಲ್ಲಿ ಮೈಸೂರು ರಾಜ ಸಂಸ್ಥಾನ ಕೂಡ ಅತ್ಯಂತ ಪ್ರಮುಖವಾದುದ್ದು. ಕ್ರಿ.ಶ. 1399ರಲ್ಲಿ 33 ಹಳ್ಳಿಗಳ ಒಂದು ಪುಟ್ಟ ಪಾಳೇಗಾರಿಕೆಯಾಗಿ ಪ್ರಾರಂಭವಾದ

*Please cite this article as: ಮಂಗಳಮ್ಮ ಎಸ್.* (2022). *ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಆಡಳಿತ: ಮಹಾರಾಜರಿಂದ ರಾಜ್ಯಪಾಲರವರೆಗೆ. ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(1). ಪು.ಸಂ. 132–136.*

ಯದುವಂಶದ ಅರಸೊತ್ತಿಗೆ ಕಾಲಕ್ರಮೇಣ ವಿಶಾಲವಾದ ಮೈಸೂರು ಸಂಸ್ಥಾನವಾಗಿ ಬೆಳೆದು ಸುಮಾರು 550 ವರ್ಷಗಳ ದೀರ್ಘಕಾಲದ ಆಡಳಿತವನ್ನು ನಡೆಸಿತು. ಜಯಚಾಮರಾಜೇಂದ್ರ ಒಡೆಯರವರು ಮೈಸೂರು ರಾಜ ಸಂಸ್ಥಾನವನ್ನು ಆಳಿದವರಲ್ಲಿ 25ನೆಯ ಹಾಗೂ ಕೊನೆಯ ಅರಸ. ಯುವರಾಜ ನರಸಿಂಹರಾಜ ಒಡೆಯರ್ ಮತ್ತು ಯುವರಾಣಿ ಕೆಂಪುಚೆಲುವಾಜಮ್ಮಣಿ ಇವರಿಗೆ ಏಕಮಾತ್ರ ಪುತ್ರರಾಗಿ 18 ಜುಲೈ, 1919 ರಂದು ಮೈಸೂರಿನಲ್ಲಿ ಜನಿಸಿದರು. ಬಾಲ್ಯದಿಂದಲೇ ಚತುರತೆಯಿಂದ ಎಲ್ಲಾ ವಿಷಯವನ್ನು ಗಮನಿಸುತ್ತ–ಕಲಿಯುತ್ತ ಬೆಳೆದ ಇವರು ಆರಂಭಿಕ ಶಿಕ್ಷಣವನ್ನು ರಾಜಮನೆತನದ ಶಾಲೆಯಲ್ಲಿ ಪಡೆದರು. ನಂತರ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಐದು ಬಂಗಾರದ ಪದಕಗಳೊಂದಿಗೆ ಉನ್ನತ ದರ್ಜೆಯಲ್ಲಿ ಮುಗಿಸಿದರು. ಒಡೆಯರವರು ಕನ್ನಡ, ಸಂಸ್ಕೃತ, ಉರ್ದು, ಇಂಗ್ಲಿಷ್, ವಿಜ್ಞಾನ, ಕಾನೂನು, ರಾಜ್ಯಶಾಸ್ತ್ರ, ಸಾರ್ವಜನಿಕ ಆಡಳಿತ, ತತ್ವಶಾಸ್ತ್ರ ಅಲ್ಲದೇ ಸಂಗೀತ, ಕಲೆ, ದೈಹಿಕ ಶಿಕ್ಷಣ, ಕುದುರೆಸವಾರಿ ಹಾಗೂ ಕ್ರಿಕೆಟ್‌ಗಳಲ್ಲೂ ಸಹ ಸಾಕಷ್ಟು ಪರಿಣಿತಿಯನ್ನು ಪಡೆದಿದ್ದರು. ಜೊತೆಗೆ ಇವರು ಉತ್ತಮ ವಾಗ್ಮಿ ಕೂಡ ಆಗಿದ್ದರು. ಅನಂತರ ಉನ್ನತ ಶಿಕ್ಷಣವನ್ನು ಕಾಶಿ ಹಿಂದೂ ವಿಶ್ವವಿದ್ಯಾನಿಲದಲ್ಲಿ ಮುಂದುವರಿಸಿ ಎಲ್.ಎಲ್.ಡಿ ಪ್ರಶಸ್ತಿಯನ್ನುಗಳಿಸಿದರು. ವಿದೇಶ ಸಂಚಾರವನ್ನು ಕೈಗೊಂಡು ವಿವಿಧ ದೇಶಗಳ ಆಡಳಿತವನ್ನು ಮತ್ತು ಅದರ ಕಾರ್ಯವೈಖರಿಯನ್ನು ಗಮನಿಸಿ ಆಡಳಿತ ಮತ್ತು ನೀತಿ ಜ್ಞಾನಕ್ಕೆ ಸಂಬಂಧಿಸಿದಂತೆ ವಿಶೇಷ ಪರಿಣಿತಿಯನ್ನು ಪಡೆದುಕೊಂಡರು. ಸಂಗೀತದಲ್ಲಿ ಹೆಚ್ಚಿನ ಒಲವನ್ನು ಹೊಂದಿದ್ದ ಇವರು ಲಂಡನ್ನಿನ ಪ್ರಸಿದ್ಧ ಸಂಸ್ಥೆ 'ಗಿಲ್ಡ್ ಹಾಲ್ ಸ್ಕೂಲ್ ಆಫ್ ಮ್ಯೂಸಿಕ್'ನಿಂದ ಲೈಸನ್ಷಿಯೇಟ್ ಪದವಿಯನ್ನು ಸಂಗೀತದಲ್ಲಿ ಪಡೆದರು.

ಜಯಚಾಮರಾಜೇಂದ್ರ ಒಡೆಯರವರು ಒಬ್ಬ ಶ್ರೇಷ್ಠ ವಾಗ್ಗೇಯಕಾರ, ಕಲೆ–ಸಾಹಿತ್ಯ–ಸಂಸ್ಕೃತಿಗಳ ಉದಾರ ಪೋಷಕ, ಉತ್ತಮ ಕಲಾವಿದ, ಸ್ವಯಂ ವಿದ್ವಾಂಸರು ಹಾಗೂ ಉತ್ತಮ ಸಾಹಿತಿಯಾಗಿದ್ದರು. ಭಾರತೀಯ ಹಾಗೂ ಪಾಶ್ಚಾತ್ಯ ಸಂಗೀತದಲ್ಲಿ ಆಳವಾದ ಜ್ಞಾನ ಹೊಂದಿದ್ದ ಇವರು "ಶ್ರೀ ಜಯಚಾಮರಾಜೇಂದ್ರ ಗ್ರಂಥ ರತ್ನಮಾಲ" ಎಂಬ ಗ್ರಂಥಮಾಲೆ ಪ್ರಾರಂಭಿಸಿದರು. ಈ ಮೂಲಕ ಪ್ರಾಚೀನ ಭಾರತೀಯ ಸಂಸ್ಕೃತಿಯ ಆಧಾರಗಳಾದ ವೇದ, ಪುರಾಣ, ಗ್ರಂಥಶಾಸ್ತ್ರಗಳನ್ನು ಸಂಸ್ಕೃತದಿಂದ ಕನ್ನಡಭಾಷೆಗೆ ಅನುವಾದಿಸಿ ಜನಸಾಮಾನ್ಯರಿಗೆ ದೊರೆಯುವಂತೆ ಮಾಡಿದರು. ಈ ಒಂದು ಗ್ರಂಥಮಾಲಿಕೆಯು ಒಡೆಯರವರ ಹೆಸರನ್ನು ಅಜರಾಮರವಾಗಿ ಮಾಡಿದೆ ಎಂಬುವುದರಲ್ಲಿ ಯಾವ ಸಂಶಯವೂ ಇಲ್ಲ. ಭಾರತೀಯ ಸಂಸ್ಕೃತಿ ಮತ್ತು ತತ್ವಶಾಸ್ತ್ರದ ಅನಧಿಕೃತ ರಾಯಭಾರಿಯಾಗಿ ಅನೇಕ ಬಾರಿ ದೇಶ–ವಿದೇಶಗಳಲ್ಲಿ ತತ್ವಜ್ಞಾನ, ಕಲೆ–ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಸಂಗೀತ(ವಿಶೇಷವಾಗಿ ಶಾಸ್ತ್ರೀಯ ಸಂಗೀತ) ಕುರಿತು ವಿದ್ವತ್‌ಪೂರ್ಣ ಭಾಷಣಗಳನ್ನು ನೀಡಿದ್ದರು. ಒಡೆಯರವರು ಉತ್ತಮ ವಿದ್ವಾಂಸರಾಗಿದ್ದು ಸ್ವತಃ ಅವರೇ ಹಲವಾರು ಕೃತಿಗಳನ್ನು ರಚಿಸಿದ್ದಾರೆ. *ದತ್ತಾತ್ರೇಯ ದಿ ವೇ ಅಂಡ್ ದಿ ಗೋಲ್, ದಿ ಗೀತಾ ಅಂಡ್ ಇಂಡಿಯನ್ ಕಲ್ಚರ್, ದಿ ರಿಲಿಜನ್ ಅಂಡ್ ದಿ ಮ್ಯಾನ್, ದಿ ಏಸ್ತೇಟಿಕ್ ಫಿಲಾಸಫಿ ಆಫ್ ಇಂಡಿಯಾ* ಇವು ಅವರು ಬರೆದ ಅತ್ಯುತ್ತಮ ಕೃತಿಗಳಾಗಿವೆ. ಇವರ ಕಲೆ–ಸಾಹಿತ್ಯದ ಮೇಲಿನ ಅಪಾರ ಜ್ಞಾನವನ್ನು ಗುರುತಿಸಿ 1936ರಲ್ಲಿ ಆಸ್ಟ್ರೇಲಿಯಾದ ಕ್ವೀನ್‌ಲ್ಯಾಂಡ್ ವಿಶ್ವವಿದ್ಯಾಲಯ ಮತ್ತು 1955ರಲ್ಲಿ ಅಣ್ಣಾಮಲೈ ವಿಶ್ವವಿದ್ಯಾಲಯ ಡಿ.ಲಿಟ್ (Doctor of Literature) ಪದವಿಯನ್ನು ನೀಡಿ ಗೌರವಿಸಿತು.

ಹಾಗೂ 1942ರಲ್ಲಿ ಬನಾರಸ್ ವಿಶ್ವವಿದ್ಯಾಲಯ **'ಡಾಕ್ಟರ್ ಆಫ್ ಲಾ'** (Doctor of Law) ಪದವಿಯನ್ನು ನೀಡಿತು. ಅಷ್ಟೇ ಅಲ್ಲದೇ ಇವರ ಅನನ್ಯ ಪಾಂಡಿತ್ಯ ಮತ್ತು ಆಡಳಿತ ಸಾಧನೆಯನ್ನು ಮನಗಂಡು ಬ್ರಿಟಿಷ್ ಸರ್ಕಾರ 1945ರಲ್ಲಿ G.C.S.I (Knight Grand Commander of the Most Exalted Order of the State of India) ಬಿರುದನ್ನು ಹಾಗೂ 1946ರಲ್ಲಿ G.C.B (Knight Grand Cross of the Most Honourable Order of the Bath) ಬಿರುದನ್ನು ನೀಡಿ ಗೌರವಿಸಿತು. ಅವರ ಹಿರಿಮೆ ಇನ್ನೊಬ್ಬರು ಹೊರಿಸಿದ್ದಲ್ಲ, ವಂಶಪಾರಂಪರ್ಯವಾಗಿ ಬಂದದ್ದೂ ಅಲ್ಲ. ಬಹುಪಾಲು ತಾವೇ ದುಡಿದುಗಳಿಸಿದ್ದು.

ಮಹಾರಾಣಿ ಸತ್ಯಪ್ರೇಮಕುಮಾರಿ ಮತ್ತು ತ್ರಿಪುರ ಸುಂದರಮ್ಮಣ್ಣಿ ಮಹಾರಾಜರ ಇಬ್ಬರು ಪತ್ನಿಯರು. ಇವರಿಗೆ ಗಾಯತ್ರಿದೇವಿ, ಮೀನಾಕ್ಷಿದೇವಿ, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್, ಕಾಮಾಕ್ಷಿದೇವಿ, ಇಂದ್ರಾಕ್ಷಿದೇವಿ ಹಾಗೂ ವಿಶಾಲಾಕ್ಷಿದೇವಿ ಎಂಬ 6 ಜನ ಮಕ್ಕಳಿದ್ದರು. ಮೈಸೂರು ರಾಜ ಸಂಸ್ಥಾನದ ಜನಪ್ರಿಯ ದೊರೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜಯಚಾಮರಾಜೇಂದ್ರ ಒಡೆಯರವರ ದೊಡ್ಡಪ್ಪ ಹಾಗೂ ಪೂರ್ವಾಧಿಕಾರಿ. ನಾಲ್ವಡಿ ಕೃಷ್ಣರಾಜರಿಗೆ ಪುತ್ರ ಸಂತಾನವಿಲ್ಲದ ಕಾರಣ ಅವರ ಸಹೋದರರಾದ ಕಂಠೀರವ ನರಸಿಂಹರಾಜರ ಪುತ್ರ ಜಯಚಾಮರಾಜೇಂದ್ರ ಒಡೆಯರಿಗೆ ಪಟ್ಟಾಭಿಷೇಕ ಮಾಡಿಸಲು ತಯಾರಿ ನಡೆಸಿದರು. ಬಾಲ್ಯದಿಂದಲೂ ರಾಜಮನೆತನದ ವಾತಾವರಣ ಹಾಗೂ ತಮ್ಮ ದೊಡ್ಡಪ್ಪ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರವರ ಮಾರ್ಗದರ್ಶನದಲ್ಲಿ ಬೆಳೆದ ಇವರು ಸಾಕಷ್ಟು ಆಡಳಿತಾತ್ಮಕ ವಿಚಾರಗಳನ್ನು ಮತ್ತು ತಂತ್ರಗಳನ್ನು ಪ್ರಾಯೋಗಿಕವಾಗಿ ಕಲಿತಿದ್ದರು. ಮುಂದೆ ಅವರು ಮಾರ್ಚ್ 28, 1940ರಂದು ಮೈಸೂರು ರಾಜ ಸಂಸ್ಥಾನದ ಯುವರಾಜನಾಗಿ, ನಂತರ ಸೆಪ್ಟೆಂಬರ್ 08, 1940ರಂದು ಮಹಾರಾಜರಾಗಿ ಪಟ್ಟಾಭಿಷಕ್ತರಾದರು. ಒಡೆಯರ್‌ರವರು ಜಪಾನ್ ಮತ್ತು ಯುರೋಪಿನ ಅನೇಕ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ಅಭಿವೃದ್ಧಿ ಕಾರ್ಯಗಳು ಮತ್ತು ಆಡಳಿತ ವೈಖರಿಯ ಬಗ್ಗೆ ಹೆಚ್ಚಿನ ವಿಷಯವನ್ನು ತಿಳಿದುಕೊಳ್ಳುವ ಮೂಲಕ ತಮ್ಮ ಆಡಳಿತ ಅವಧಿಯಲ್ಲಿ ಕಾರ್ಯರೂಪಕ್ಕೆ ತರುವ ಪ್ರಯತ್ನವನ್ನು ಮಾಡಿದರು. ನಂತರ **ಇನಾಯತುಲ್ಲಾ ಮೆಕ್ರೀ** *(ಸ್ವಾತಂತ್ರ್ಯ ಹೋರಾಟಗಾರ, ನಿಸ್ವಾರ್ಥಿ ಉದ್ಯಮಿ, ಹಾಗೂ ಕರ್ನಾಟಕದ ನಾಗರಿಕ ಮತ್ತು ಮಿಲಿಟರಿ ಕೇಂದ್ರದ ಮುನ್ಸಿಪಲ್ ಕಮಿಷನರ್)* ಮತ್ತು **ಮೆರಿಯರ್ ಎಲ್ವಿನ್** *(ಬ್ರಿಟಿಷ್ ಮೂಲದ ಮಾನವಶಾಸ್ತ್ರಜ್ಞ, ಜನಾಂಗಶಾಸ್ತ್ರಜ್ಞ, ಬುಡಕಟ್ಟು ಕಾರ್ಯಕರ್ತ ಮತ್ತು ಜವಾಹರ್‌ಲಾಲ್ ನೆಹರು ಸರ್ಕಾರದಲ್ಲಿ ಈಶಾನ್ಯ ಭಾರತ ಬುಡಕಟ್ಟು ವ್ಯವಹಾರಗಳ ಸಲಹೆಗಾರ)* ಅವರಿಂದ ಆಡಳಿತ ನಿರ್ವಹಣೆಯಲ್ಲಿ ವಿಶೇಷ ತರಬೇತಿ ಪಡೆದರು.

**ಜವಾಬ್ದಾರಿಯುತ ಸರ್ಕಾರದ ರಚನೆಯಲ್ಲಿ ಜಯಚಾಮರಾಜೇಂದ್ರ ಒಡೆಯರವರ ಪಾತ್ರ...!**

ಇವರ ಆಡಳಿತ ಅವಧಿಯಲ್ಲಿ ಜಾಗತೀಕವಾಗಿ ಎರಡನೇ ಮಹಾ ಯುದ್ಧವು ಪ್ರಾರಂಭವಾಯಿತು. ಇದರಿಂದಾಗಿ ಆರ್ಥಿಕ ಸಮಸ್ಯೆ ಮತ್ತು ಆಹಾರದ ಅಭಾವ ಪರಿಸ್ಥಿತಿಯೂ ತಲೆದೋರಿತ್ತು. ಇದರ ಜೊತೆಗೆ ಸ್ವಾತಂತ್ರ್ಯದ ಪರವಾಗಿ ಅನೇಕ ಚಳುವಳಿಗಳು ತೃತೀಯ ಜಗತ್ತಿನ ದೇಶಗಳಲ್ಲಿ ಕಾವೇರಿದವು. ಅದು ಭಾರತವನ್ನು ಬಿಡಲಿಲ್ಲ!. ದೇಶದಾದ್ಯಂತ ಬ್ರಿಟೀಷ್ ಸರ್ಕಾರದ ವಿರುದ್ಧ ಸಂಪೂರ್ಣ ಸ್ವಾತಂತ್ರ್ಯದ

ತೀವ್ರವಾದ ಹೋರಾಟಗಳು ಪ್ರಾರಂಭವಾದವು. ಜವಾಬ್ದಾರಿಯುತ ಸರ್ಕಾರ ರಚನೆಯ ಕೂಗು ದೇಶದೆಲ್ಲೆಡೆ ಮೊಳಗತೊಡಗಿತು. ಪ್ರಜಾಪ್ರಭುತ್ವ ತತ್ವದ ಅನುಷ್ಠಾನದಲ್ಲಿ ಒಲವಿಟ್ಟು ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ಸ್ವಾತಂತ್ರ್ಯ ಸಾಧನೆಯತ್ತ ತೀವ್ರವಾಗಿ ಮುನ್ನಡೆದಿತ್ತು. ಪರಿಣಾಮವಾಗಿ ಜೂನ್ 03, 1947ರಂದು ಭಾರತದ ಸ್ವಾತಂತ್ರ್ಯದ ಬಗ್ಗೆ ಭಾರತದ ವೈಸರಾಯ್ ಲಾರ್ಡ ಮೌಂಟ್‌ಬ್ಯಾಟನ್ ಒಂದು ಯೋಜನೆಯನ್ನು ಹೊರಡಿಸಿದರು. ಇದರ ಪ್ರಕಾರವಾಗಿ ಭಾರತದಲ್ಲಿ ರಾಜ ಸಂಸ್ಥಾನಗಳು ಇಚ್ಛಿಸಿದಲ್ಲಿ ಸ್ವತಂತ್ರವಾಗಿ ಉಳಿಯುವ ಅಥವಾ ಭಾರತ ಒಕ್ಕೂಟಕ್ಕಾದರು ಸೇರಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಟ್ಟರು. ಮುಂದೆ 1947 ಆಗಸ್ಟ್ 15ರಂದು ಭಾರತವು ಸ್ವಾತಂತ್ರ್ಯ ಪಡೆಯಿತು. ಈ ಸಂದರ್ಭದಲ್ಲಿ ದೇಶದ ಬಹುಪಾಲು ರಾಜ ಸಂಸ್ಥಾನಗಳು ಭಾರತ ಸರ್ಕಾರದಲ್ಲಿ **'ರಾಜ ಸಂಸ್ಥಾನಗಳ ವಿಲೀನದ ಒಪ್ಪಂದ'**ಕ್ಕೆ ಸಹಿ ಹಾಕುವ ಮೂಲಕ ಭಾರತದ ಒಕ್ಕೂಟದಲ್ಲಿ ವಿಲೀನಗೊಂಡವು, ಅದರಲ್ಲಿ ಮೈಸೂರು ಸಂಸ್ಥಾನವು ಕೂಡ ಒಂದಾಗಿತ್ತು. ಈ ರೀತಿಯಾಗಿ ಬದಲಾಗುತ್ತಿರುವ ಪರಿಸ್ಥಿತಿಯ ಪ್ರಜ್ಞೆಯನ್ನು ಬೆಳೆಸಿಕೊಳ್ಳುವ ಮೂಲಕ ಸಂಸ್ಥಾನಗಳನ್ನು ಭಾರತೀಯ ಏಕತೆಯಲ್ಲಿ ವಿಲೀನಗೊಳಿಸಲು ಸ್ವಪ್ರೇರಣೆಯಿಂದ ಮೊದಲು ಮುಂದೆ ಬಂದಂತಹ ಅರಸರಲ್ಲಿ ಪ್ರಮುಖರಾದವರೆಂದರೆ ಜಯಚಾಮರಾಜೇಂದ್ರ ಒಡೆಯರ್ ಅವರು.

ಸ್ವಾತಂತ್ರ್ಯ ಬಂದಾಗ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರಿಗೆ ರಾಷ್ಟ್ರಧ್ವಜರೋಹಣ ಮಾಡಲು ಅವಕಾಶವನ್ನು ನಿರಾಕರಿಸಲಾಯಿತು. ಮತ್ತು ಅರಮನೆ ಹಾಗೂ ಸರ್ಕಾರಿ ಕಚೇರಿಗಳ ಮೇಲೆ ರಾಷ್ಟ್ರಧ್ವಜಕ್ಕೆ ಸ್ಥಾನವಿರಲಿಲ್ಲ. ಈ ಕಾರಣಕ್ಕಾಗಿ ಮೈಸೂರು ಸಂಸ್ಥಾನವು ಜವಾಬ್ದಾರಿಯುತ ಸರ್ಕಾರ ಸ್ಥಾಪನೆಗೆ ಪಣತೊಟ್ಟು ನಿಂತಿತು. ಇಂತಹ ಒಂದು ಸಂದರ್ಭದಲ್ಲಿ ಮಹಾರಾಜ ಜಯಚಾಮರಾಜೇಂದ್ರ ಒಡೆಯರವರು ಭಾರತ ಒಕ್ಕೂಟವನ್ನು ಸೇರಿದ್ದರು ಕೂಡ ಜವಾಬ್ದಾರಿ ಸರ್ಕಾರವನ್ನು ಮಾನ್ಯ ಮಾಡಲಿಲ್ಲ. ಇದರ ಪರಿಣಾಮವಾಗಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟಗಳು ತೀವ್ರಗೊಂಡವು. ಈ ನಿಟ್ಟಿನಲ್ಲಿ 1947ರ ಸೆಪ್ಟೆಂಬರ್ ತಿಂಗಳಲ್ಲಿ ರಾಜ್ಯದಲ್ಲಿ ಜವಾಬ್ದಾರಿಯುತ ಸರ್ಕಾರದ ಸ್ಥಾಪನೆಗಾಗಿ ಮೈಸೂರು ಚಲೋ ಮತ್ತು ಅರಮನೆ ಸತ್ಯಾಗ್ರಹವು ತೀವ್ರಗತಿಯಲ್ಲಿ ನಡೆದವು. ಪರಿಸ್ಥಿತಿಯ ತೀವ್ರತೆಯ ಪರಿಣಾಮವಾಗಿ ಒಡೆಯರವರು ಜವಾಬ್ದಾರಿಯುತ ಸರ್ಕಾರವನ್ನು ಮಾನ್ಯ ಮಾಡುವುದು ಅನಿವಾರ್ಯವಾಯಿತು. ಪರಿಣಾಮವಾಗಿ ಸೆಪ್ಟೆಂಬರ್ 07ರಂದು ರಾಜ್ಯದಲ್ಲಿ ಜವಾಬ್ದಾರಿಯುತ ಸರ್ಕಾರ ಸ್ಥಾಪಿಸುವ ಹೇಳಿಕೆಯನ್ನು ಮಹಾರಾಜರು ಘೋಷಿಸಿದರು. ಮುಂದೆ 1947 ಅಕ್ಟೋಬರ್ 24ರಂದು ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಕೆ.ಸಿ.ರೆಡ್ಡಿಯವರು ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿ ಆಯ್ಕೆಯಾದರು ಹಾಗೂ ಇವರ ನೇತೃತ್ವದಲ್ಲಿ ಜವಾಬ್ದಾರಿ ಸರ್ಕಾರ ರಚನೆಯಾಯಿತು. ಇದರ ಪರಿಣಾಮವಾಗಿ ಪ್ರಜಾಪ್ರತಿನಿಧಿ ಸಭೆಯು ಶಾಸನಸಭೆಯಲ್ಲಿ ಪರಿವರ್ತನೆಗೊಂಡು ರಾಜತ್ವ ಕೊನೆಗೊಂಡಿತು. ಹೀಗೆ ರಾಜ ಸಂಸ್ಥಾನವನ್ನು ಪ್ರಜಾರಾಜ್ಯವನ್ನಾಗಿ ಬದಲಾಯಿಸಿದ ಜಯಚಾಮರಾಜೇಂದ್ರ ಒಡೆಯರವರು ಮೈಸೂರು ರಾಜ್ಯದ ನಾಮಮಾತ್ರ ಮಹಾರಾಜರಾಗಿ ಜನವರಿ 26, 1950ರ ತನಕ ಮುಂದುವರೆದರು. ಪ್ರಜಾಪ್ರಭುತ್ವದ ಸ್ಥಾಪನೆಗೆ ಕ್ರಮಕೈಗೊಂಡು 1950 ಜನವರಿ 26 ರಂದು ಭಾರತವು ಗಣರಾಜ್ಯವೆಂದು ಘೋಷಣೆಯಾದ ಮೇಲೆ ಜಯಚಾಮರಾಜರು ರಾಜಪ್ರಮುಖರಾಗಿ 1956 ರವರೆಗೆ ಕಾರ್ಯ ನಿರ್ವಹಿಸಿದರು. ನಂತರ ಭಾಷಾವಾರು ರಾಜ್ಯಗಳ ಪುನರ್ ವಿಂಗಡಣಾ ಕಾಯಿದೆ

1956ರ ಅನ್ವಯ ಕನ್ನಡ ಭಾಷಾ ಪ್ರದೇಶಗಳನ್ನೆಲ್ಲಾ ಒಟ್ಟುಗೂಡಿಸಿ ನವೆಂಬರ್ 1956ರಲ್ಲಿ "ವಿಶಾಲ ಮೈಸೂರು ರಾಜ್ಯ"ವನ್ನು ರಚಿಸಲಾಯಿತು. ಜಯಚಾಮರಾಜೇಂದ್ರ ಒಡೆಯರವರು ಈ ವಿಶಾಲ ಮೈಸೂರು ರಾಜ್ಯದ ಪ್ರಥಮ ರಾಜ್ಯಪಾಲರಾಗಿ ನೇಮಕಗೊಂಡು 1964ರವರೆಗೆ ಅಧಿಕಾರ ನಡೆಸಿದರು. ಒಂದು ವಿಶೇಷವೆಂದರೆ, ಈ ಅವಧಿಯಲ್ಲಿ ಇವರು ಯಾವುದೇ ರೀತಿಯ ವೇತನ ಪಡೆಯಲಿಲ್ಲ. ತದನಂತರ ಮದರಾಸು ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡು 1967ರವರೆಗೂ ಆ ಹುದ್ದೆಯಲ್ಲಿ ಮುಂದುವರಿದರು. ಮುಂದೆ ಭಾರತ ಸರ್ಕಾರದಿಂದ ರಾಜಧನ ಪಡೆಯುವ ಮಾಜಿ ಮಹಾರಾಜರಾದರು. ರಾಜಧನ ಪದ್ಧತಿ ರದ್ದಾದ ನಂತರ ಸರ್ಕಾರಕ್ಕೆ ತೆರಿಗೆ ಕಟ್ಟುವ ಜನಸಾಮಾನ್ಯರಾದರು.

**ಉಪಸಂಹಾರ**

**'ರಾಜಯೋಗಿ'** ಎಂದೇ ಬಿರುದಾಂಕಿತರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಕರ್ನಾಟಕ ರಾಜ್ಯ ಕಂಡಂತಹ ಅದ್ವಿತೀಯ ಮಹಾರಾಜರು. ಇವರ ಕಾಲವನ್ನು 'ಮೈಸೂರಿನ ಸುವರ್ಣಕಾಲ' ಎಂದೇ ಪರಿಗಣಿಸಬಹುದು. ಮಹಾರಾಜರಾಗಿ, ರಾಜಪ್ರಮುಖರಾಗಿ, ಮತ್ತು ರಾಜ್ಯಪಾಲ ಸಹಿತ ಹಲವಾರು ಹುದ್ದೆಗಳ ಮೂಲಕ ಆದರ್ಶಯುತ ಮಾದರಿ ಆಡಳಿತವನ್ನು ನಡೆಸಿ ಜನರ ಮನಸ್ಸಿನಲ್ಲಿ ಮತ್ತು ಇತಿಹಾಸದ ಪುಟದಲ್ಲಿ ಶಾಶ್ವತವಾಗಿ ಉಳಿದರು. ಸಚ್ಚಾರಿತ್ರ್ಯಕ್ಕೆ ಕೊಡುವಷ್ಟು ಮಹತ್ವವನ್ನು ಒಡೆಯರು ಮತ್ತಾವುದಕ್ಕು ನೀಡಿದವರಲ್ಲ. "ಶಿಷ್ಟನಿಯಮಗಳಿಲ್ಲದ ಸ್ವಾತಂತ್ರ್ಯದಿಂದ, ಆತ್ಮಸಂಯಮವಿಲ್ಲದ ಸ್ವಾತಂತ್ರ್ಯದಿಂದ, ಯಾವ ದೇಶಕ್ಕಾದರು ಕ್ಷೇಮವಿಲ್ಲ" ಎಂದು ಅವರು ಪದೇ ಪದೇ ಒತ್ತಿ ಹೇಳುತ್ತಿದ್ದರು. ರಾಜಪ್ರಭುತ್ವವನ್ನು ತ್ಯಜಿಸಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ ಇವರ ನಿಸ್ವಾರ್ಥ ನಡೆಯನ್ನು ಕಂಡು ಬೆರಗಾಗಿ ರಾಷ್ಟ್ರಕವಿ ಕುವೆಂಪು ಅವರು, 'ಎಲ್ಲರೂ ಸಿಂಹಾಸನಾಧೀಕಾರಿಯಾಗಿ ಮಹಾರಾಜರಾದರೇ, ಇವರು ಅದನ್ನು ತ್ಯಜಿಸಿಯೇ ಮಹಾರಾಜರಾದರು' ಎಂದು ವರ್ಣಿಸಿದ್ದಾರೆ. ಅವರು ನಮ್ಮೆಲ್ಲರಿಗೂ ಆದರ್ಶಪ್ರಾಯ, ಪ್ರೇರಣೆದಾಯಕರೂ ಎಂಬುದು ವಿಶಿಷ್ಟ. ಅಂತಿಮವಾಗಿ ಸೆಪ್ಟೆಂಬರ್ 23, 1974ರಂದು ಶ್ವಾಸಕೋಶದ ಉರಿಯೂತ ಸಮಸ್ಯೆಯಿಂದ ಬೆಂಗಳೂರಿನಲ್ಲಿ ನಿಧನರಾದರು. ಕನ್ನಡ ನಾಡು–ನುಡಿಗೆ ಮಹಾರಾಜರ ಕೊಡುಗೆ ಅನನ್ಯವಾದುದು.

**ಪರಾಮರ್ಶನ ಗ್ರಂಥಗಳು**


- ರಂಗಸ್ವಾಮಯ್ಯ, ಜಿ.ಆರ್. (2001). ಕರ್ನಾಟಕದ ಸಂಕ್ಷಿಪ್ತ ಚರಿತ್ರೆ,. ಜೆ.ಎಸ್.ಎಸ್. ಪ್ರಿಂಟರ್ಸ್, ಮೈಸೂರು.
- ಫಾಲಾಕ್ಷ. (2006). ಆಧುನಿಕ ಕರ್ನಾಟಕದ ಅವಲೋಕನ. ಟೆಕ್ ಪ್ರಿಂಟ್ಸ್, ಮೈಸೂರು.
- ಕೃಷ್ಣರಾವ್ ಎಂ.ವಿ. ಮತ್ತು ಎಂ. ಕೇಶವ ಭಟ್. (1970). ಕರ್ನಾಟಕ ಇತಿಹಾಸ ದರ್ಶನ. ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು.
- https://en.wikipedia.org/wiki/Jayachamarajendra wadiyars
- https://www.mysoorunews.com/royls-to-host-jayachamarajendra/wadiyars. birth-cenenary/
- https:www.thehindu.com/news/national/karnata/jayachamaraja-wadiyar-was-an-able-administrator-ex-governor/article285